(3)



OS No. 170/2022

DW1.

ಸಾಕ್ಷಿಯನ್ನು ದಿನಾಂಕಃ **07-08-2025** ರಂದು ಕರೆದು ಪ್ರಮಾಣ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ ಶ್ರೀ ವಿ.ಎಸ್.ಎಸ್ ವಕೀಲರಿಂದ.**

ನಾನು ಮುಖ್ಯ ವಿಚಾರಣೆಯಾಗಿ ಸಲ್ಲಿಸಿದ ಪ್ರಮಾಣ ಪತ್ರದಲ್ಲಿ ಇರುವ ಅಂಶಗಳು ನನಗೆ ಗೊತ್ತು ಮತ್ತು ಸದರಿ ಅಂಶಗಳು ಸತ್ಯವಾಗಿರುತ್ತವೆ ಮತ್ತು ಅವುಗಳಲ್ಲಿ ಬರೆದಿರುವ ಸಂಗತಿಗಳನ್ನು ನಾನು ಓದಿ ತಿಳಿದುಕೊಂಡು ಅದರ ಮೇಲೆ ಸಹಿ ಮಾಡಿರುತ್ತೇನೆ.

**ಪಾಟೀ ಸವಾಲು :-** ವಾದಿ ಮತ್ತು ವಾದಿ ಪರ ವಕೀಲರು ಗೈರು ಇರುವುದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸರಿ ಇದೆ.

C/C.ಹೆಚ್ಚುವರಿ ದಿವಾಣಿ ನ್ಯಾಯಾಧೀಶರು
ಮುಧೋಳ.

ಸಾಕ್ಷಿಯ ಸಹಿಃ

ಸಾಕ್ಷಿಯನ್ನು ದಿನಾಂಕಃ **28-11-2025** ರಂದು ಕರೆದು ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲು :- ವಾದಿಯರ ಪರ ಶ್ರೀ.ಎಸ್.ವಾಯ್.ಜೆ ವಕೀಲರಿಂದ.**

ನಾನು ದ್ವೀತಿಯ ಪಿ.ಯು.ಸಿ ವರೆಗೆ ಓದಿರುತ್ತೇನೆ. ನನಗೆ ಸರಳ ಗಣಿತ ಬರುತ್ತದೆ. ನಾವು, ನನ್ನ ಸಹೋದರರಾದ ಪ್ರಕಾಶ ಮತ್ತು ವಿಠ್ಠಲ ಮತ್ತು ನಮ್ಮ ಕುಟುಂಬದವರು ಹಾಗೂ ವಾದಿಯರು ಕೂಡಿಕೊಂಡು ಒಂದೇ ಮನೆಯಲ್ಲಿ ಇರುತ್ತೇವೆ ಎಂದರೆ ಸರಿ. ದಾವಾ ಆಸ್ತಿಗಳು ನಮ್ಮ ಪಿತ್ರಾರ್ಜಿತ ಆಸ್ತಿಗಳು ಆಗಿರುತ್ತವೆ. ನನ್ನ ಸಹೋದರನಾದ ಭೀಮಶಿ ಇವರು ತೀರಿಕೊಂಡ ನಂತರ ಮನೆಯ ಎಲ್ಲ ಜವಾಬ್ದಾರಿಗಳನ್ನು ನಾನೇ ನೋಡಿಕೊಳ್ಳುತ್ತಿದ್ದೆ ಎಂದರೆ ಸಾಕ್ಷಿಯು ನನ್ನ ಸಹೋದರನಾದ ವಿಠ್ಠಲ ಇವನು ನೊಡಿಕೊಳ್ಳುತ್ತಿದ್ದನು ಎಂದು ನುಡಿಯುತ್ತಾರೆ. 2022 ನೇ ಸಾಲಿನಲ್ಲಿ ಸದರಿ ವಿಠ್ಠಲ ಇವನು ತೀರಿಕೊಂಡಿರುತ್ತಾನೆ. ಈ ದಾವೆಯಲ್ಲಿ ಒಂದು ಜಮೀನು ಮತ್ತು ಒಂದು ಮನೆ ದಾವಾ ಆಸ್ತಿಗಳು ಆಗಿರುತ್ತವೆ. ಈ ದಾವೆ ಸಲ್ಲಿಸುವುದಕ್ಕಿಂತ ಮುಂಚೆ ನಾವು ದಾವಾ ಆಸ್ತಿಗಳ ಬಗ್ಗೆ ವಾಟ್ನಿಯನ್ನು ಮಾಡಿಕೊಂಡಿರುವುದಿಲ್ಲ.

ದಾವಾ ಜಮೀನು 02 ಎಕರೆ 16 ಗುಂಟೆ ಇರುತ್ತದೆ ಮತ್ತು ಅದರಲ್ಲಿ ನಾವು ಕಬ್ಬನ್ನು ಬೆಳೆಯುತ್ತೇವೆ. ಸದರಿ ಜಮೀನದಿಂದ ಬಂದ ಆದಾಯವನ್ನು ಯಾರು ತೆಗೆದುಕೊಳ್ಳುತ್ತಾರೆ ಎಂದರೆ ಸಾಕ್ಷಿಯು ನಮ್ಮ ಕುಟುಂಬಕ್ಕೆ ಸಾಲ ಇರುತ್ತದೆ, ಆದ್ದರಿಂದ ಸದರಿ ಜಮೀನದಿಂದ ಬಂದ ಆದಾಯದಿಂದ ಸದರಿ ಸಾಲವನ್ನು ತೀರಿಸುತ್ತಾ ಬಂದಿರುತ್ತೇವೆ ಎಂದು ನುಡಿಯುತ್ತಾರೆ. ನಮ್ಮ ಕುಟುಂಬದ ಮೇಲೆ ಸಾಲ ಇರುತ್ತದೆ

28/11

ಎಂದು ನಾವು ನಮ್ಮ ಪ್ರತಿವಾದ ಪತ್ರದಲ್ಲಾಗಾಲಿ ಅಥವಾ ನನ್ನ ಸಾಕ್ಷ ಪ್ರಮಾಣ ಪತ್ರದಲ್ಲಾಗಲಿ ಬರೆಸಿರುವುದಿಲ್ಲ ಎಂದರೆ ಸರಿ.

ವಾದಿ ಈ ದಾವೆಯನ್ನು ದಾವಾ ಮನೆಯಲ್ಲಿ ಸ್ವಲ್ಪ ಜಾಗೆ ಹೆಚ್ಚು ಕಡಿಮೆ ಬಂದಿದ್ದರಿಂದ ಮಾಡಿರುತ್ತಾಳೆ. ನಾನು ನೊಂದಾಯಿತ ವಾಟ್ನಿ ಪತ್ರಕ್ಕೆ ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ವಾಟ್ನಿ ಪತ್ರ ಬರೆಯಲು ಸುರೇಶ ನಾರಾಯಣ ಕೊಡಗ ರವರು ನೀಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಾಟ್ನಿ ಪತ್ರವನ್ನು ತಹಶೀಲ್ದಾರ ಕಚೇರಿ ಆವರಣದಲ್ಲಿ ಬರೆಸಿದ್ದು ಇರುತ್ತದೆ. ಸದರಿ ವಾಟ್ನಿ ಪತ್ರ ನೊಂದ ಮಾಡಲು ನೀವು ಎಷ್ಟು ಫೀ ಯನ್ನು ನೀಡಿರುತ್ತಿರಿ ಎಂದರೆ ಸಾಕ್ಷಿಯು ನನ್ನ ಸಹೋದರನಾದ ವಿಠ್ಠಲ ರವರಿಗೆ ಮಾಹಿತಿ ಇತ್ತು ಎಂದು ನುಡಿಯುತ್ತಾರೆ. ದಾವಾ ಜಮೀನದ ವಿಸ್ತೀರ್ಣ 02 ಎಕರೆ 16 ಗುಂಟೆ ಮತ್ತು ದಾವಾ ಮನೆಯ ವಿಸ್ತೀರ್ಣ 114 ಚದರ ಅಡಿ ಇರುತ್ತದೆ. ವಾಟ್ನಿ ಪತ್ರದ ಪ್ರಕಾರ ದಾವಾ ಮನೆಯಲ್ಲಿ ನಾನು 80 ಚದರ ಮೀಟರ ಆಸ್ತಿ ನನಗೆ ಬಂದಿರುತ್ತದೆ ಎಂದರೆ ಸರಿ. ಸದರಿ ವಾಟ್ನಿ ಪತ್ರದ ಪ್ರಕಾರ ವಾದಿಯರಿಗೆ ಸದರಿ ಆಸ್ತಿಯಲ್ಲಿ 17 ಚದರ ಅಡಿ ಆಸ್ತಿ ಮಾತ್ರ ಬಂದಿರುತ್ತದೆ ಎಂದರೆ ಸರಿ. ಸದರಿ ವಾಟ್ನಿಯಲ್ಲಿ ಪ್ರತಿವಾದಿ ನಂ.3 ರವರಿಗೆ ಎಷ್ಟು ಆಸ್ತಿ ಬಂದಿರುತ್ತದೆ ಎಂದರೆ ಸಾಕ್ಷಿಯು ಅವರ ಗಂಡನಾದ ವಿಠ್ಠಲ ಇವನು ರೂಪಾಯಿ ಐದು ಲಕ್ಷಗಳನ್ನು ತೆಗೆದುಕೊಂಡು ಅವನ ಹಿಸ್ಸೆಯ ಆಸ್ತಿಯನ್ನು ಬಿಟ್ಟುಕೊಟ್ಟಿರುತ್ತಾನೆ ಎಂದು ನುಡಿಯುತ್ತಾರೆ. ವಿಠ್ಠಲ ಇವರಿಗೆ ನೀವು ರೂಪಾಯಿ ಐದು ಲಕ್ಷಗಳನ್ನು ಹೇಗೆ ಕೊಟ್ಟಿರುತ್ತಿರಿ ಎಂದರೆ ಸಾಕ್ಷಿಯ ದಾವಾ ಮನೆಯನ್ನು ಬೇರೊಬ್ಬರಿಗೆ ಮಾರಾಟ ಮಾಡಲು ನಾವು ಒಪ್ಪಿಕೊಂಡು ಅವರಿಂದ ಹಣವನ್ನು ಇಸಿದುಕೊಂಡು ವಿಠ್ಠಲರವರಿಗೆ ನೀಡಿರುತ್ತೇವೆ ಎಂದು ನುಡಿಯುತ್ತಾರೆ.

ಪ್ರತಿವಾದಿ ನಂ.1 ರವರಿಗೂ ಸಹ ವಾಟ್ನಿ ಪತ್ರದ ಪ್ರಕಾರ 17 ಚದರ ಅಡಿ ಜಾಗೆ ದಾವಾ ಮನೆಯಲ್ಲಿ ಬಂದಿರುತ್ತದೆ. ನಾನು ಶಾಲೆ ಕಲಿತಿದ್ದರಿಂದ ಮತ್ತು ವಾದಿ ನಂ.1 ನನ್ನ ಸಹೋದರನ ಹೆಂಡತಿಯಾಗಿರುವುದರಿಂದ ಅವಳು ನಾನು ಹೇಳಿದ ಹಾಗೇ ಬಂದು ಸಹಿ ಮಾತ್ರ ಮಾಡಿರುತ್ತಾಳೆ ಮತ್ತು ನಿಪಿ-5 ವಾಟ್ನಿ ಪತ್ರದಲ್ಲಿ ಬರೆದಿರುವ ವಿಷಯಗಳು ಅವಳಿಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ವಾದಿಯರಿಗೆ ಮೋಸ ಮಾಡಿ ನಿಪಿ-5 ರಂತೆ ಒಂದು ಖೊಟ್ಟಿ ವಾಟ್ನಿ ಪತ್ರವನ್ನು ತಯಾರು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ವಿಠ್ಠಲ ಇವರು ಜೀವಂತ ಇರುವಾಗ ಅದರ ಮೇಲೆ ಸಹಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಾನು ವಾದಿಯರಿಗೆ ಮತ್ತು ಉಳಿದ ಪ್ರತಿವಾದಿಯರಿಗೆ ನಂಬಿಕೆ ದ್ರೋಹ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ನಾನು ಒಂದು ಸುಳ್ಳು ವಾಟ್ನಿ ಪತ್ರವನ್ನು ತಯಾರು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಸಾಕ್ಷ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲ ವಿಷಯಗಳು ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸರಿ ಇದೆ.

28/11

C/C.ಹೆಚ್ಚುವರಿ ದಿವಾಣಿ ನ್ಯಾಯಾಧೀಶರು
ಮುಧೋಳ.

**ಸಾಕ್ಷಿಯ ಸಹಿಃ**